ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	407
ಸದಸ್ಯರ ಹೆಸರು	:	ಶ್ರೀ ಪ್ರಕಾಶ್ ಕೆ.ರಾಥೋಡ್ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ	:	15.09.2021.
ಉತ್ತರಿಸುವ ಸಚಿವರು	:	ಮಾನ್ಯ ಲೋಕೋಪಯೋಗಿ ಸಚಿವರು

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ	ಜೇವರ್ಗಿ ಸಂಕೇಶ್ವರ ರಸ್ತೆಯು ರಾಷ್ಟ್ರೀಯ ಹೆದ್ದಾರಿಯಾಗಿದ್ದು, 4 ಪಥದ ರಸ್ತೆಯಾಗಿ ಪರಿವರ್ತನೆಗೊಂಡಿದೆಯೇ;	ರಾಷ್ಟ್ರೀಯ ಹೆದ್ದಾರಿ 50 (ಹಳೆಯ ನಂ.218) ಜೇವರ್ಗಿ-ಸಂಕೇಶ್ವರ ರಸ್ತೆಯ ಭಾಗವಾದ ಜೀವರ್ಗಿಯಿಂದ ವಿಜಯಪುರದವರೆಗೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವ್ಯಾಪ್ತಿಗೆ ಬರುತ್ತದೆ. ಸದರಿ ರಸ್ತೆಯನ್ನು NHDP Phase IV ರ ಅಡಿಯಲ್ಲಿ EPC ಮಾದರಿಯಲ್ಲಿ ಗಟ್ಟಿ ಬಾಹುಗಳುಳ್ಳ ದ್ವಿಪಥ ರಸ್ತೆಯನ್ನು ನಿರ್ಮಿಸಿರುತ್ತಾರೆಂದು ಭಾರತೀಯ ರಾಷ್ಟ್ರೀಯ ಪ್ರಾಧಿಕಾರದವರು ವರದಿಸಿರುತ್ತಾರೆ. ಈ ರಸ್ತೆಯ ಮುಂದಿನ ಭಾಗವಾದ ರಾಷ್ಟ್ರೀಯ ಹೆದ್ದಾರಿ 548ಬಿ ಕೇಂದ್ರ ಸರ್ಕಾರದ ರಾಜ್ಯ ಪತ್ರ ಅಧಿಸೂಚನೆ ಎಸ್.ಓ. ನಂ.1358 (ಇ) ದಿನಾಂಕ: 23.03.2018 ರಂದು ವಿಜಯಪುರದಿಂದ ತಿಕೋಟ, ಕಾಗವಾಡ, ಚಿಕ್ಕೋಡಿ ಸಂಕೇಶ್ವರ (ಗೋಟೂರ) 169.00 ಕಿ.ಮೀ ರಸ್ತೆಯನ್ನು ಮೇಲ್ದರ್ಜೆಗೇರಿಸಲಾಗಿರುತ್ತದೆ. ಸದರಿ ರಾಷ್ಟ್ರೀಯ ಹೆದ್ದಾರಿ 548ಬಿ, ರಾಷ್ಟ್ರೀಯ ಹೆದ್ದಾರಿ ವಲಯ ವ್ಯಾಪ್ತಿಗೆ ಸೇರಿದ್ದು, ಕಿಮೀ.0.00 (ವಿಜಯಪುರ) ರಿಂದ ಕಿಮೀ.80.00 (ಮುರುಗುಂಡಿ) ವರೆಗಿನ ರಸ್ತೆಯನ್ನು ಗಟ್ಟಿ ಬಾಹುಗಳುಳ್ಳ ದ್ವಿಪಥ ರಸ್ತೆಯನ್ನು (10.00ಮೀ. ಕ್ಯಾರೇಜ್‌ವೇ), 80.00 ಕಿಮೀ.ವರೆಗಿನ ರಸ್ತೆ ವ್ಯಾಪ್ತಿಯ ಕಾಮಗಾರಿ ರೂ.497.01 ಕೋಟಿಗಳ ಮೊತ್ತಕ್ಕೆ ಪ್ರಾದೇಶಿಕ ಕಛೇರಿ, ಭೂಸಾರಿಗೆ ಮಂತ್ರಾಲಯ, ಬೆಂಗಳೂರು ಇವರಿಂದ ಟೆಂಡರನ್ನು ಕರೆಯಲಾಗಿದ್ದು, ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕಃ29-09-2021 ಆಗಿರುತ್ತದೆ. ಇನ್ನುಳಿದ ಭಾಗವಾದ (ರಾಷ್ಟ್ರೀಯ ಹೆದ್ದಾರಿ ನಂ.548ಬಿ) ಕಿಮೀ. 80.00 (ಮುರಗುಂಡಿ) ರಿಂದ ಕಿಮೀ.110.00 (ಕಾಗವಾಡ ಕ್ರಾಸ್) ರವರೆಗೆ ದ್ವಿಪಥದ ರಸ್ತೆ ಅಭಿವೃದ್ಧಿಗಾಗಿ 30.00 ಕಿಮೀ. ಉದ್ದ ಹಾಗೂ ಕಿಮೀ.110.00 (ಕಾಗವಾಡ ಕ್ರಾಸ್) ರಿಂದ ಕಿಮೀ.169.00 (ಸಂಕೇಶ್ವರ) ರವರೆಗೆ (ಮಹಾರಾಷ್ಟ್ರ ಗಡಿ ಕೂಡು ರಸ್ತೆ 2.60 ಕಿಮೀ ಒಳಗೊಂಡು) 61.60 ಕಿಮೀ ಉದ್ದ ಚತುಷ್ಪಥ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲು ವಿಸ್ತೃತ ಯೋಜನಾ ವರದಿ ತಯಾರಿಸಲು ಟೆಂಡರ ಕರೆಯಲಾಗಿದ್ದು ತಾಂತ್ರಿಕ ಮೌಲ್ಯ ಮಾಪನ ಹಂತದಲ್ಲಿರುತ್ತದೆ.
ಆ	ಹಾಲಿ ರಸ್ತೆಗೆ ಬೇಕಾಗಿರುವ ಜಮೀನುಗಳನ್ನು ಸರ್ಕಾರ ವಶಪಡಿಸಿಕೊಂಡು ರಸ್ತೆ ಅಭಿವೃದ್ಧಿ ಕಾಮಗಾರಿ ನಡೆಸುತ್ತಿದೆಯೇ;	ರಾಷ್ಟ್ರೀಯ ಹೆದ್ದಾರಿ 50 (ಹಳೆಯ ನಂ.218) ಜೇವರ್ಗಿ - ಸಂಕೇಶ್ವರ ರಸ್ತೆಯ ಭಾಗವಾದ ಜೀವರ್ಗಿಯಿಂದ ವಿಜಯಪುರ ವರೆಗೆ ಪಿಐಯು, ಗುಲ್ಬರ್ಗ, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ರವರ ವ್ಯಾಪ್ತಿಗೆ ಬರುತ್ತಿದ್ದು, ಈಗಾಗಲೇ ಗಟ್ಟಿ ಬಾಹುಗಳುಳ್ಳ ದ್ವಿಪಥ ರಸ್ತೆಗೆ ಮೇಲ್ದರ್ಜೆಗೇರಿಸಲಾಗಿರುತ್ತದೆಂದು ಭಾರತೀಯ ರಾಷ್ಟ್ರೀಯ ಪ್ರಾಧಿಕಾರದವರು ವರದಿಸಿರುತ್ತಾರೆ.

		ಈ ರಸ್ತೆಯ ಮುಂದಿನ ಭಾಗವಾದ ರಾಷ್ಟ್ರೀಯ ಹೆದ್ದಾರಿ ನಂ548ಬಿ ಕಿಮೀ.0.00 (ವಿಜಯಪುರ) ರಿಂದ ಕಿಮೀ.80.00 (ಮುರಗುಂಡಿ) ವರೆಗೆ ದ್ವಿ–ಪಥ+ಪೇವ್ಡ್ ಶೋಲ್ಡರ್ (10.00 ಮೀಟರ್ ಕ್ಯಾರೇಜವೇ) 80.00 ಕಿಮೀ. ವರೆಗಿನ ರಸ್ತೆಯ ಕಾಮಗಾರಿಗಾಗಿ 18.33 ಹೆಕ್ಟರ್ ಜಮೀನನ್ನು ಸರಕಾರದಿಂದ ಭೂ–ಸ್ವಾದೀನಪಡಿಸಿಕೊಳ್ಳಲು ಕೇಂದ್ರ ಸರಕಾರದ ಗೆಜೆಟ್ ಅಧಿಸೂಚನೆ ಹೊರಡಿಸಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಸರಪಳಿ 80.00 ರಿಂದ 169.00 ವರೆಗೆ ವಿಸ್ತೃತ ಯೋಜನಾ ವರದಿ ತಯಾರಿಸಿದ ನಂತರ ಅವಶ್ಯವಿರುವ ಜಮೀನುಗಳನ್ನು ವಶಪಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.
ಇ	ಈ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ ಎಂದು ಪರಿಗಣಿಸಿದ್ದರೂ ಸಹ ಕಾಮಗಾರಿ ಕೈಗೊಳ್ಳದೆ ರಸ್ತೆಗಳು ಹದಗೆಟ್ಟಿದ್ದು ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)	ಜೇವರ್ಗಿ ಸಂಕೇಶ್ವರ ರಸ್ತೆಯ ಭಾಗವಾದ ರಾಷ್ಟ್ರೀಯ ಹೆದ್ದಾರಿ–ನಂ218 (50) ಜೇವರ್ಗಿಯಿಂದ ವಿಜಯಪುರದವರೆಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಪಡಿಸಲಾಗಿರುತ್ತದೆಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ. ಸದರಿ ರಸ್ತೆಯ ಮುಂದಿನ ಭಾಗವಾದ ರಾಷ್ಟ್ರೀಯ ಹೆದ್ದಾರಿ ನಂ548ಬಿ ಯಂದು ಕೇಂದ್ರ ಸರಕಾರದ ಗೆಜೆಟ್ ಅಧಿಸೂಚನೆ SO No.1358 (E) ದಿನಾಂಕಃ23–03–2018 ರಂದು ವಿಜಯಪುರದಿಂದ ತಿಕೋಟಾ, ಕಾಗವಾಡ, ಚಿಕ್ಕೋಡಿ, ಸಂಕೇಶ್ವರ (ಗೋಟೂರ) 169.00 ಕಿಮೀ ರಸ್ತೆಯನ್ನು ಮೇಲ್ದರ್ಜೆಗೇರಿಸಲಾಗಿದ್ದು, ಸದರಿ ರಸ್ತೆಯನ್ನು ಲೋಕೋಪಯೋಗಿ ಇಲಾಖೆ ವಿಜಯಪುರ ಹಾಗೂ ಚಿಕ್ಕೋಡಿ ವಿಭಾಗದಿಂದ ಮೇ–2020 ತಿಂಗಳಿನಲ್ಲಿ ರಾಷ್ಟ್ರೀಯ ಹೆದ್ದಾರಿ ವಲಯಕ್ಕೆ ಹಸ್ತಾಂತರ ಮಾಡಿಸಿಕೊಳ್ಳಲಾಗಿದೆ. ತದನಂತರ ಕಿಮೀ. 0.00 (ವಿಜಯಪುರ) ರಿಂದ 80.00 (ಮುರಗುಂಡಿ) ವರೆಗೆ ಪೂರ್ಣ ಪ್ರಮಾಣದ ರಸ್ತೆ ಅಭಿವೃದ್ಧಿ ಪಡಿಸಲು ರೂ.497.01 ಕೋಟಿಗಳ ಮೊತ್ತಕ್ಕೆ ಪ್ರಾದೇಶಿಕ ಕಛೇರಿ, ಭೂಸಾರಿಗೆ ಮಂತ್ರಾಲಯ, ಬೆಂಗಳೂರು, ಇವರಿಂದ ಟೆಂಡರನ್ನು ಕರೆಯಲಾಗಿದ್ದು, ಟೆಂಡರ್‌ನ ಕೊನೆಯ ದಿನಾಂಕಃ29–09–2021 ರಂದು ನಿಗದಿಪಡಿಸಲಾಗಿದೆ ಮತ್ತು ಇದರ ಮುಂದಿನ ಭಾಗವಾದ ಕಿಮೀ.80.00 (ಮುರಗುಂಡಿ) ರಿಂದ ಕಿಮೀ.169.00 (ಸಂಕೇಶ್ವರ) ವರೆಗೆ ನಿಯತಕಾಲಿಕ ನವೀಕರಣ ಕಾಮಗಾರಿಯನ್ನು ಕೈಗೊಳ್ಳಲು ಟೆಂಡರ್ ಕರೆಯಲಾಗಿದ್ದು, 16 ಗುತ್ತಿಗೆದಾರರು ಟೆಂಡರ್ ಸಲ್ಲಿಸಿದ್ದು, ತಾಂತ್ರಿಕ ಮೌಲ್ಯ ಮಾಪನ ಹಂತದಲ್ಲಿರುತ್ತದೆ.

ಕಡತ ಸಂಖ್ಯೆ: ಲೋಇ 208 ಸಿಎನ್‌ಹೆಚ್ 2021 (ಇ)

(ಸಿ.ಸಿ.ಪಾಟೀಲ)
ಲೋಕೋಪಯೋಗಿ ಸಚಿವರು